**ಒ.ಎಸ್.ನಂಬ್ರ: 214/2010 ಡಿ.ಡಬ್ಲ್ಯೂ : 1**

ದಿನಾಂಕ: 27-09-2022 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣೀಕರಿಸಲಾಯಿತು

**ಮುಂದುವರಿದ ಪಾಟಿ ಸವಾಲು: ಶ್ರೀ ಎಮ್.ಜೆ.ಎಸ್. ವಕೀಲರಿಂದ**

ನನ್ನ ತಾಯಿ, ಪ್ರತಿವಾದಿ 1 ಮತ್ತು 2 ರವರಿಗೆ ವೀಲುನಾಮೆ ಅಡಿಯಲ್ಲಿ ಕೆಲವು ಆಸ್ತಿಗಳು ಬಂದಿರುತ್ತವೆ ಎಂದರೆ ಸರಿ. ದಾವಾ ಬಿ ಶೆಡ್ಯೂಲ್ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಉಳಿದುಕೊಂಡಿರುತ್ತವೆ. ವಾದಿಯು ಈ ದಾವೆಯಲ್ಲಿ ಅಂತಹ ಯಾವುದೇ ಆಸ್ತಿಗಳು ಉಳಿದುಕೊಂಡಿಲ್ಲ ಎಂದು ಸಾಧನೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿರುತ್ತದೆ. ಪ್ರತಿವಾದಿ 1 ಮತ್ತು 2 ಮತ್ತು ನನ್ನ ತಾಯಿಗೆ ದಾವಾ ಬಿ ಶೆಡ್ಯೂಲ್ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ತೆಕ್ಕಟ್ಟೆ ಗ್ರಾಮದಲ್ಲಿ ಉಳಿದುಕೊಂಡಿರುತ್ತೇವೆ ಎಂದು ತೋರಿಸುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲದೆ ದಾವಾ ಎ ಶೆಡ್ಯೂಲ್ ಆಸ್ತಿ ಸಹ ನಮ್ಮಲ್ಲಿ ಇರುತ್ತದೆ. ನನ್ನ ಪ್ರಕಾರ ತೆಕ್ಕಟ್ಟೆ ಗ್ರಾಮದಲ್ಲಿ ಬಿ ಶೆಡ್ಯೂಲ್ ಆಸ್ತಿಗಳನ್ನು ಬೇರೆ ಆಸ್ತಿಗಳು ಎಂದರೆ ದಾವಾ ಎ ಶೆಡ್ಯೂಲ್ ಆಸ್ತಿಗಳು ಆಗಿರುತ್ತವೆ. ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ತೆಕ್ಕಟ್ಟೆ ಗ್ರಾಮದಲ್ಲಿ ಇದೆ. ಸದ್ರಿ ಆಸ್ತಿಗಳು ಈ ದಾವೆಗೆ ಸಂಬಂಧಿಸದೆ ಇರುವುದರಿಂದ ಅವುಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ದಾವೆಯಲ್ಲಿ ಒಳಗೊಂಡ ದಾವಾ ಎ ಶೆಡ್ಯೂಲ್ ಆಸ್ತಿಗಳ ಮಾಹಿತಿ ನನಗೆ ಗೊತ್ತಿರುತ್ತದೆ. ಅವುಗಳ ಪಹಣಿ ಪತ್ರಿಕೆಗಳನ್ನು ನಾನು ನೋಡಿರುತ್ತೇನೆ. ಸದ್ರಿ ಪಹಣಿ ಪತ್ರಿಕೆಗಳು ಪ್ರತಿವಾದಿ 1 ರಿಂದ 4 ಮತ್ತು 6 ರವರ ಹೆಸರಿನಲ್ಲಿರುತ್ತದೆ. ಸದ್ರಿ ಪಹಣಿ ಪತ್ರಿಕೆಗಳನ್ನು 2 ತಿಂಗಳ ಹಿಂದೆ ನಾನು ನೋಡಿರುತ್ತೇನೆ. ಸದ್ರಿ ಆಸ್ತಿಗಳ ಬಾಬ್ತು ತೀರ್ವೆಯನ್ನು ನಾನೆ ಪಾವತಿ ಮಾಡುತ್ತಿದ್ದೇನೆ. ತೀರ್ವೆ ರಶೀದಿಗಳು ನನ್ನ ಬಳಿ ಇರುತ್ತದೆ ಅವುಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಬಿ ಶೆಡ್ಯೂಲ್ ಆಸ್ತಿಯು ಈಗಾಗಲೇ ಮಾರಾಟಮಾಡಲಾಗಿದ್ದು ಅದು ವಾದಿಯ ಹೆಸರಿನಲ್ಲಿ ದಾಖಲಾಗಿರುತ್ತದೆ. ಬಿ ಶೆಡ್ಯೂಲ್ ಆಸ್ತಿಯನ್ನು ವಾದಿಯು ಖರೀದಿ ಪಡೆದಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ಬಿ

ಶೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ತಂದೆ ತಾಯಿ ಕ್ರಯ ಪತ್ರವನ್ನು ವಾದಿಯರಿಗೆ ಮಾಡಿಕೊಟ್ಟಿರುತ್ತಾರೆ. ನನ್ನ ತಂದೆ ಸ್ವತಃ ಆಸ್ತಿಯ ಮಾಲೀಕನಾಗಿರದೆ ಪ್ರತಿವಾದಿ 1 ಮತ್ತು 2 ರವರ ಜಿ.ಪಿ.ಎ ಆದಾರದ ಮೇಲೆ ಕ್ರಯ ಪತ್ರವನ್ನು ಮಾಡಿಕೊಂಡಿರುತ್ತಾರೆ. ನಿ.ಪಿ.11 ರ ಕ್ರಯ ಪತ್ರ ಓದಿ ನೋಡಿದ್ದು ಅದರ ಒಕ್ಕಣಿಕೆ ಸರಿಯಾಗಿರುತ್ತದೆ.

ಪ್ರತಿವಾದಿ 1, 2 ಮತ್ತು ನನ್ನ ತಾಯಿ ಬೇರೆ ಊರಿನಲ್ಲಿ ವಾಸವಿದ್ದಿದ್ದರಿಂದ ತೆಕ್ಕಟ್ಟೆ ಗ್ರಾಮದ ಆಸ್ತಿಗಳನ್ನು ನೋಡಿಕೊಳ್ಳಲು ಆಗದೆ ಇದ್ದಿದ್ದರಿಂದ ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಾಯಿ, 1 ಮತ್ತು 2 ನೇ ಪ್ರತಿವಾದಿಯರು ವಾದಿಗೆ ಹೊರತುಪಡಿಸಿ ತೆಕ್ಕಟ್ಟೆ ಗ್ರಾಮದ ಬೇರೆ ಯಾವುದೇ ಆಸ್ತಿಗಳನ್ನು ಮಾರಾಟ ಮಾಡಿರುವುದಿಲ್ಲ. ಆ ಕುರಿತು ನಾನು 1 ಮತ್ತು 2 ನೇ ಪ್ರತಿವಾದಿಯರ ಜೊತೆ ವಿಚಾರಣೆ ಮಾಡಿರುತ್ತೇನೆ.

ನನಗೆ ಈಗ ತೋರಿಸುತ್ತಿರುವ ಕ್ರಯ ಪತ್ರವು ಪ್ರತಿವಾದಿ 1 ಮತ್ತು 2 ರವರು ಕೆ. ವೆಂಕಟಕೃಷ್ಣ ಎನ್ನುವವರಿಗೆ ಬರೆದುಕೊಟ್ಟ ಕ್ರಯ ಪತ್ರವಾಗಿರುತ್ತದೆ ಎಂದರೆ ಸರಿ. ಸದ್ರಿ ದಾಖಲೆಯು ದೃಡೀಕೃತ ನಕಲು ಪ್ರತಿಯಾಗಿದ್ದು ಅದನ್ನು ನಿ.ಪಿ.12 ಎಂದು ಗುರುತಿಸಲಾಯಿತು.ಇದೇ ರೀತಿ ಪ್ರತಿವಾದಿ 1 ಮತ್ತು 2 ಹಾಗೂ ನನ್ನ ತಾಯಿ ತೆಕ್ಕಟ್ಟೆ ಗ್ರಾಮದ ಅವರ ಬಾಬ್ತು ಆಸ್ತಿಗೆ ಒಟ್ಟು ಎಷ್ಟು ಕ್ರಯ ಪತ್ರಮಾಡಿಕೊಟ್ಟಿರುತ್ತಾರೆ ಎಂದರೆ 3 ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ . ಆ ಎಲ್ಲ ಮಾರಾಟ ಬಾಬ್ತು ವ್ಯವಹಾರವನ್ನು ನನ್ನ ತಂದೆ ಮತ್ತು ತಾಯಿ ಮಾಡಿರುತ್ತಾರೆ. ಆ ರೀತಿ ವ್ಯವಹಾರವಾಗುವಾಗ 1 ನೇ ಪ್ರತಿವಾದಿ ಬೆಂಗಳೂರಿನಲ್ಲಿ ವ್ಯವಹಾರ ಮಾಡಿಕೊಂಡಿದ್ದರು ಹಾಗೂ 2 ನೇ ಪ್ರತಿವಾದಿ ದೆಹಲಿಯಲ್ಲಿ ನೌಕರಿಯಲ್ಲಿದ್ದರು, ಆ ಕಾರಣ ಅವರಿಗೆ ವ್ಯವಹಾರದಲ್ಲಿ ನೇರವಾಗಿ ಬಾಗಿಯಾಗಲು ಸಾಧ್ಯವಾಗಲಿಲ್ಲ.

ಪ್ರತಿವಾದಿ 1 ,2 ಮತ್ತು ನನ್ನ ತಾಯಿಗೆ ಸಂಬಂಧಿಸಿದ ತೆಕ್ಕಟ್ಟೆ ಗ್ರಾಮದ ಆಸ್ತಿಗಳನ್ನು ಯಾವ ಸಮಯದಿಂದ ಮಾರಾಟ ಮಾಡಲು ಪ್ರಾರಂಭಿಸಿರುತ್ತಾರೆ ಮತ್ತು ಎಲ್ಲಿಯವರೆಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಆ ಕುರಿತು ಸ್ಪಷ್ಟ ಮಾಹಿತಿ ಇರುವುದು 1 ಮತ್ತು 2 ನೇ ಪ್ರತಿವಾದಿಗೆ ಎಂದರೆ ಸರಿ. ಪ್ರತಿವಾದಿ 1 ಮತ್ತು 2 ತೆಕ್ಕಟ್ಟೆ ಗ್ರಾಮದ ಆಸ್ತಿಯ ಬಗ್ಗೆ ನನ್ನ ತಂದೆ-ತಾಯಿ ಯಾವ ರೀತಿ ವ್ಯವಹಾರ ಮಾಡಿರುವುದು ಸ್ಪಷ್ಟವಾಗಿ ತಿಳಿದಿದೆ ಎಂದರೆ ಸರಿ ಹಾಗೂ ನನಗೂ ಕೂಡ ತಿಳಿದಿರುತ್ತದೆ. ನಾನು ಈ ಕುರಿತು 1 ಮತ್ತು 2 ನೇ ಪ್ರತಿವಾದಿಯರನ್ನು ವಿಚಾರಿಸಿರುತ್ತೇನೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**

ಓ.ಹೇ.ಕೇ.ಸ.ಇದೆ　　　　　ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**